ಪ್ರತಿಬಿಂಬ
PRATIBIMBA – Multidisciplinary Kannada Research Journal of IIMRD
ISSN: 2582-2284
Vol-2 Issue 5, MAR-APR 2021, 121-126
©*IIMRD*, Mysuru
IIMRD JOURNALS
www.iimrd.com

# ಕನ್ನಡ ಸಾಹಿತ್ಯಕ್ಕೆ ಕವಿ ನಾಗಚಂದ್ರನ ಕೊಡುಗೆ

ವಾಲಪ್ಪ ಲಮಾಣಿ [1]

## ಪೀಠಿಕೆ

ಪ್ರಪಂಚದ ವಿಶಿಷ್ಟ ಸಾಹಿತ್ಯಗಳಲ್ಲಿ ಕನ್ನಡ ಸಾಹಿತ್ಯವೂ ಒಂದು. ಅದು ತನ್ನದೇ ಆದ ಸತ್ವಯುತ ಪರಂಪರೆಯ ಹಾದಿಯಲ್ಲಿ ಇಂದಿಗೂ ಅದು ಮುಂದುವರಿಯುತ್ತಿದೆ. ಕನ್ನಡ ಕಾವ್ಯ ಕಂಡ ಅಪರೂಪದ ಅಪ್ಪಟ ಕಾವ್ಯ ಪ್ರತಿಭೆ ಎಂದರೆ ಪಂಪ. ಹೀಗಾಗಿಯೇ ಆತ ಕನ್ನಡ ಕಾವ್ಯ ಪರಂಪರೆಯ ಕಾವ್ಯ ಪಿತಾಮಹನೆಂದು ಜನಜನಿತನಾಗಿದ್ದಾನೆ. ಅದಕ್ಕೆ ಕಾರಣ ಆತ ರಚಿಸಿದ ಕನ್ನಡ ಸಾಹಿತ್ಯ ಅಷ್ಟೇ ಅಲ್ಲ ಕಾವ್ಯ ಜಗತ್ತು ಕಂಡ ಸತ್ವಶಾಲಿಯಾದ ಕೃತಿರತ್ನಗಳು ಅವುಗಳೆಂದರೆ ಆಗಮಿಕ ಕಾವ್ಯವಾದ ಆದಿಪುರಾಣ ಹಾಗೂ ಲೌಕಿಕ ಕಾವ್ಯವಾದ ವಿಕ್ರಮಾರ್ಜುನ ವಿಜಯ. ಹೀಗಾಗಿ ಆತನು ಕನ್ನಡ ಸಾಹಿತ್ಯದ ಸುವರ್ಣಯುಗವಾದ ಚಂಪೂ ಸಾಹಿತ್ಯದ ಯುಗಪ್ರವರ್ತಕನಾಗಿ ಕಂಡುಬರುತ್ತಾನೆ. ಜೈನ ಮತೀಯನಾದ ನಾಗಚಂದ್ರನು ರಾಮಾಯಣವನ್ನು ಮೊಟ್ಟಮೊದಲ ಬಾರಿಗೆ ಜೈನ ಧರ್ಮದ ದೃಷ್ಟಿಕೋನದ ಪರಂಪರೆಯ ಹಿನ್ನಲೆಯಲ್ಲಿ ರಚಿಸಿ ಕನ್ನಡ ಸಾಹಿತ್ಯ ಸರೋವರದಲ್ಲಿ ಪರಿಣಿತ ಈಜುಗಾರನಾಗಿ, ವಿಶಿಷ್ಟ ಕವಿಶ್ರೇಷ್ಠನಾಗಿ ಕಂಡುಬರುತ್ತಾನೆ.

## ನಾಗಚಂದ್ರ

ನಾಗಚಂದ್ರನು ಉತ್ತರ ಕರ್ನಾಟಕದ ವಿಜಯಪುರದಲ್ಲಿ ಬತ್ತದ ಸಾಹಿತ್ಯ ಚಿಲುಮೆಯಾಗಿ ಜೀವಿಸಿದ್ದನೆಂದು ಕಂಡು ಬರುತ್ತದೆ. ಇದಕ್ಕೆ ಕಾರಣ ಆತನ ಕೃತಿಗಳಲ್ಲಿ ಒಂದಾದ ಮಲ್ಲಿನಾಥ ಪುರಾಣದ ಹದಿನಾಲ್ಕನೇ ಆಶ್ವಾಸದ ಎರಡುನೂರ ಹನ್ನೊಂದನೇ ಪದ್ಯದಲ್ಲಿ ಬರುವ 'ವಿಜಯಪುರ' ವೆಂಬ ಊರಿನಲ್ಲಿ ಮಲ್ಲಿನಾಥ ಜಿನಾಲಯವನ್ನು ಕಟ್ಟಿಸಿದನು. ಎಂಬ ಅಂಶದಿಂದ ಇದು ಖಚಿತವಾಗುತ್ತದೆ. ನಾಗಚಂದ್ರನು ಹನ್ನೊಂದನೇ ಶತಮಾನದ ಕೊನೆ ಹಾಗೂ ಹನ್ನೆರಡನೇ ಶತಮಾನದಲ್ಲಿ ಬಾಳಿ ಬದುಕಿದ ಕವಿಯಾಗಿ ಕಂಡು ಬರುತ್ತಾನೆ. ಆರ್. ನರಸಿಂಹಚಾರ್ ಅವರು ನಾಗಚಂದ್ರನ ಕಾಲ ಕ್ರಿ. ಶ. 1100 ಎಂದರೆ ಕನ್ನಡದ ಮೊದಲ ರಾಷ್ಟ್ರಕವಿ ಬಿರುದಿನಿಂದ ಭೂಷಿತರಾದ ಗೋವಿಂದ ಪೈ ಅವರು ಕ್ರಿ. ಶ. 1140 ಎನ್ನುತ್ತಾರೆ. ಮತದಿಂದ ಜೈನಧರ್ಮದ

[1] ***ಸಹಾಯಕ ಪ್ರಾಧ್ಯಾಪಕರು, ಕನ್ನಡ ವಿಭಾಗ, ಎಂ.ಜಿ.ವ್ಹಿ.ಸಿ ಕಲಾ, ವಾಣಿಜ್ಯ ಹಾಗೂ ವಿಜ್ಞಾನ ಮಹಾವಿದ್ಯಾಲಯ, ಮುದ್ದೇಬಿಹಾಳ***

ಕವಿಶ್ರೇಷ್ಠ. ಕನ್ನಡನಾಡಿನ ಶ್ರೇಷ್ಠ ಸಾಮ್ರಾಜ್ಯ ಹಲವು ಕವಿಕುಲತಿಲಕರಿಗೆ ಆಶ್ರಯನ್ನು ನೀಡಿದ ಪೋಷಿಸಿದ ಸಾಮ್ರಾಜ್ಯವೆ ಹೊಯ್ಸಳ ಸಾಮ್ರಾಜ್ಯ. ಈ ಸಾಮ್ರಾಜ್ಯದಲ್ಲಿ ಆಳ್ವಿಕೆಯನ್ನು ಮಾಡಿದ ಅರಸ ಮೊದಲನೆಯ ಬಲ್ಲಾಳನ ಆಸ್ಥಾನದಲ್ಲಿ ಬಾಳಿ ಬದುಕಿದ ಕವಿಯೇ ಕನ್ನಡದ ಕವಿಪುಂಗವ ನಾಗಚಂದ್ರನೆಂಬುದು. ನಾಗಚಂದ್ರನ ಗುರುಗಳು ಬಾಲಚಂದ್ರಮುನಿ ಮತ್ತು ಮೇಘಚಂದ್ರ ತ್ರೈವಿಧ್ಯ ಎಂಬುವರು.  ನಾಗಚಂದ್ರ ಹಾಗೂ ಆತನ ಪೂರ್ವಿಕರ ಕುರಿತಾಗಿ ಆತನ ಕೃತಿಗಳಲ್ಲಿ ಯಾವುದೇ ವಿಷಯಗಳು ಉಲ್ಲೇಖವಾಗಿಲ್ಲ.

ಹಳಗನ್ನಡದ ಶ್ರೇಷ್ಠ ಕವಿಗಳಲ್ಲಿ ಒಬ್ಬನಾದ ನಾಗಚಂದ್ರನಿಗೆ ಪಂಪನ ಮೇಲೆ ತುಂಬಾ ಅಭಿಮಾನ ಹಾಗೂ ಗೌರವ. ಆದುದರಿಂದಲೋ ಏನೋ ಈತನು ತನ್ನನ್ನು ಅಭಿನವ ಪಂಪ ಎಂದು ಹೆಮ್ಮೆಯಿಂದ ಕರೆದುಕೊಂಡಿದ್ದಾನೆ. ಹನ್ನೆರಡನೇ ಶತಮಾನದಲ್ಲಿ ಜೀವಿಸಿದ್ದ ನಿಷ್ಠಾವಂತ ಜಿನ ಅನುಯಾಯಿಯೂ ಗುರುವಿನ ಆದರ್ಶ ಸೇವಕನೂ ಆಗಿದ್ದನು. ಕವಿ ನಾಗಚಂದ್ರನಿಗೆ ಕವಿತಾ ಮನೋಹರ, ಭಾರತಿ ಕರ್ಣಪೂರ ಹಾಗೂ ಸಾಹಿತ್ಯ ವಿಧ್ಯಾಧರ ಎಂಬ ಬಿರುದುಗಳಿದ್ದವು. ಹಿಂದಿನ ಕವಿಗಳಲ್ಲಿ ಪಂಪ, ಪೊನ್ನ, ರನ್ನ ಅವರಿಗೆ ವಂದಿಸುತ್ತಾ ಅವರು ಬರೆದ ಕೃತಿಗಳನ್ನು ಹೇಳುವುದನ್ನು ಈ ಕೆಳಗಿನ ಪದ್ಯದಲ್ಲಿ ಕಾಣಬಹುದು.

***"ಮನ್ನಿಸುಗೆ ಕೃತಿಗೆ ಸೌಭಾ***
***ಗ್ಯೋನ್ನತಿಯಂ ಸುಕವಿಪಂಪನಾದಿಪುರಾಣಂ***
***ಪೊನ್ನನ ಶಾಂತಿಪುರಾಣಂ***
***ರನ್ನನ ಕೃತಿರತ್ನಮೆನಿಸಿದಜಿತಪುರಾಣಂ"*** (ಚಂಪೂ ಕವಿಗಳು, ಪು.ಸಂ.69)

ನಾಗಚಂದ್ರನ ಕೃತಿರತ್ನಗಳನ್ನು ಗಮನಿಸಿದಾಗ ಅವುಗಳನ್ನು ಚಂಪೂ ಕಾವ್ಯ ಪ್ರಕಾರದಲ್ಲಿ ರಚಿಸಿದ್ದಾನೆ. ಅವನು ರಚಿಸಿದ ಕೃತಿಗಳು ಒಟ್ಟು ಎರಡು ಅವುಗಳೆಂದರೆ ಮಲ್ಲಿನಾಥ ಪುರಾಣ ಮತ್ತೊಂದು ರಾಮಚಂದ್ರಚರಿತ ಪುರಾಣ ಇವೆರಡು ಕಾವ್ಯಗಳನ್ನು ಜೈನಧರ್ಮದ ಹಿನ್ನಲೆಯಲ್ಲಿ ಆಗಮಿಕ ಕಾವ್ಯಗಳಾಗಿ ರಚಿಸಿ ಅವುಗಳಲ್ಲಿ ಧರ್ಮ ಹಾಗೂ ಕಾವ್ಯ ಧರ್ಮಗಳೆರಡನ್ನು ಉಜ್ವಲವಾಗಿ ಪ್ರದರ್ಶಿಸಿದ್ದಾನೆ. ಅವನ ಕಾವ್ಯ ರಚನಾ ಶಕ್ತಿಯು ಅದ್ಭುತವಾದುದು ಆಗಿದೆ. ಹಾಗಾಗಿಯೇ ಆತ ತನ್ನ ಕಾವ್ಯ ರಚನೆಯ ಗುಣಧರ್ಮದ ಬಗ್ಗೆ ತನ್ನ ಕೃತಿಯಾದ ಮಲ್ಲಿನಾಥ ಪುರಾಣದಲ್ಲಿ ಹೀಗೆ ಹೇಳುತ್ತಾನೆ.

***ಪದರಚನೆ ಸಜ್ಜನಶ್ರವ***
***ಣದೊಳಂಚೆಯ ತುಪ್ಪುಲಂಚೆಯಂ ತಿರಿಪಿದವೊಲ್***
***ಮೃದುವೆನೆ ಪೊಸಬಗೆ ರಸಭಾ***
***ವದೋಳೋಕುಳಿಯಾಡೆ ಪೇರ್ದನಭಿನವಪಂಪಂ*** (ಚಂಪೂ ಕವಿಗಳು, ಪು.ಸಂ.69)

**ಮಲ್ಲಿನಾಥ ಪುರಾಣ**

'ಮಲ್ಲಿನಾಥ ಪುರಾಣ'ವು ನಾಗಚಂದ್ರನು ಬರೆದ ಮೊದಲ ಕೃತಿ ಎಂದು ತಿಳಿದು ಬರುತ್ತದೆ. ಹತ್ತೊಂಬತ್ತನೆಯ ತೀರ್ಥಂಕರನಾದ ಮಲ್ಲಿನಾಥನ ಚರಿತ್ರೆಯನ್ನು ಜೈನಪುರಾಣದ ಹಿನ್ನೆಲೆಯಲ್ಲಿ ಹೇಳುವ ಕಾವ್ಯವಾಗಿದೆ. ಇದು ಹದಿನಾಲ್ಕು ಆಶ್ವಾಸಗಳಲ್ಲಿರುವ ಈ ಕಾವ್ಯವು ಗುಣಭದ್ರನ 'ಉತ್ತರ ಪುರಾಣ'ದಲ್ಲಿ ಬರುವ ಚಿಕ್ಕ ಕಥೆಯೇ ಇಲ್ಲಿ ವಿಸ್ತಾರವನ್ನು ಪಡೆದುಕೊಂಡಿತು ಎಂಬುದು ವಿಶೇಷ. ಅಲ್ಲದೆ ಈ ಕಥೆಯಲ್ಲಿ ಭವಾವಳಿಯ ಗೊಂದಲ ಇಲ್ಲದಿರುವುದರಿಂದ ಹೆಚ್ಚು ಜನ ಓದುಗರನ್ನು ಇದು ಸೆಳೆಯುತ್ತದೆ. ಸಹಜವಾಗಿ ಮಹಾಕಾವ್ಯಕ್ಕೆ ಇರುವ ವಿಶೇಷ ಲಕ್ಷಣಗಳಲ್ಲಿ ಒಂದು ಹದಿನೆಂಟು ವರ್ಣನೆಗಳು, ಇದನ್ನು ಈ ಕೃತಿಯಲ್ಲಿ ಕಾಣಬಹುದು. ನಾಗಚಂದ್ರನ 'ಮಲ್ಲಿನಾಥಪುರಾಣ'ದಲ್ಲಿ ಅದರ ಮೂಲದ ಬಗೆಗೆ ಎಲ್ಲಿಯೂ ಹೇಳಿಕೊಂಡಿಲ್ಲ. ಕಾವ್ಯದ ಪ್ರಥಮ ಆಶ್ವಾಸದ ಹದಿಮೂರನೇ ಪದ್ಯದಲ್ಲಿ ಸಮಂತಭದ್ರನನ್ನು ಸ್ಮರಿಸಿರುವುದು ನಮ್ಮ ಗಮನವನ್ನು ಸೆಳೆಯುತ್ತದೆ.

ಮೊದಲ ಎಂಟು ಆಶ್ವಾಸಗಳಲ್ಲಿ ಭೋಗದ ವೈಭವದ ಚಿತ್ರಣವಿದ್ದರೆ; ಕೊನೆಯ ಆರು ಆಶ್ವಾಸಗಳಲ್ಲಿ ಇದಕ್ಕೆ ವಿರುದ್ಧವಾದ ತ್ಯಾಗ–ವೈರಾಗ್ಯಗಳ ಚಿತ್ರಣ ಕಂಡು ಬರುತ್ತದೆ. ಜೈನ ಸಂಪ್ರದಾಯದ ದಿಗಂಬರ ಪಂಥದ ಕಥೆಯನ್ನೇ ನಾಗವರ್ಮ ಅನುಸರಿಸಿದ್ದಾನೆ. ತೀರ್ಥಂಕರನ ಪೂರ್ವಜನ್ಮಗಳ ಕಥೆಯನ್ನು ಹೇಳುವ ಬದಲಿಗೆ, ಮಲ್ಲಿನಾಥನ ಜೀವನ ವೃತ್ತಾಂತ, ತಪಸ್ಸು, ಪಂಚಕಲ್ಯಾಣ ಹೀಗೆ ಹಲವು ಜೈನಪುರಾಣದ ಅಷ್ಟಾಂಗಗಳನ್ನು ಯಶಸ್ವಿಯಾಗಿ ತಂದಿದ್ದಾನೆ. ಕಥಾವಸ್ತು ಮಾತ್ರ ಸ್ವಲ್ಪ: ಕಚ್ಚಾವತಿಯೆಂಬ ರಾಜ್ಯಕ್ಕೆ ವೀತಶೋಕಪುರವೆಂಬುದು ರಾಜಧಾನಿ. ಅಲ್ಲಿ ವೈಶ್ರವಣನೆಂಬ ರಾಜನು ವೈಭವದಿಂದ ರಾಜ್ಯಭಾರವನ್ನು ಮಾಡುತ್ತಿರುತ್ತಾನೆ. ಹೀಗಿರುವಾಗ ಒಮ್ಮೆ ಆಲದಮರವೊಂದು ಸಿಡಿಲಿನ ಕಾರಣದಿಂದ ಉರುಳಿ ಬೀಳುವುದನ್ನು ಕಾಣುತ್ತಾನೆ. ಇದರಿಂದ ಆತ ಜೀವನದಲ್ಲಿ ನೀರ್ಮೋಹ ತಾಳಿ, ನಶ್ವರತೆಯ ಅರಿವುಂಟಾಗಿ ವೈರಾಗ್ಯಪರನಾಗುತ್ತಾನೆ. ತನ್ನ ಮಗನಿಗೆ ರಾಜ್ಯಭಾರವನ್ನು ವಹಿಸಿ ತಾನು ನಾಗಯತಿಯೆಂಬ ಗುರುಗಳಲ್ಲಿ ದೀಕ್ಷೆಯನ್ನು ತೆಗೆದುಕೊಳ್ಳುತ್ತಾನೆ. ಅದಾದ ನಂತರ ಅಪರಾಜಿತ ವಿಮಾನದಲ್ಲಿ ಅಹಮಿಂದ್ರನಾಗಿ ಮುಂದಿನ ಜನ್ಮದಲ್ಲಿ ಮಿಥಿಲಾಪುರದಲ್ಲಿ ರಾಜಕುಮಾರನಾಗಿ ಮಲ್ಲಿನಾಥನೆಂಬ ಹೆಸರಿನಿಂದ ಹುಟ್ಟಿ ವೈರಾಗ್ಯದಿಂದ ಪರಿನಿಷ್ಕ್ರಮಣವನ್ನು ಹೊಂದಿ ಕೇವಲಿ ಜ್ಞಾನವನ್ನು ಸಾಧಿಸುತ್ತಾನೆ. ನಾಗವರ್ಮನು ವರ್ಣನಾಶೈಲಿ ಅತ್ಯಂತ ಸಹಜವಾಗಿ ಕಂಡು ಬರುತ್ತದೆ. ಅದಕ್ಕೆ ಉತ್ತಮ ಉದಾಹರಣೆ ಮಲ್ಲಿನಾಥಪುರಾಣದಲ್ಲಿ ವೈಶ್ರವಣನು ಕಂಡ ಆಲದಮರವು ಬೀಳುವ ದೃಶ್ಯದ ವರ್ಣನೆ ನೋಡಿ

**ಸಿಡಿಲೆಂಬ ಜವನ ಕೊಡಲಿಯ**
**ಕಡುವೊಯ್ಲಿಂ ನೆಗೆದ ಬೇರ್ಗಳೊಡನೆ ನೆಲಂ ಬಾ**
**ಯ್ವಿಡೆ ಬೆಟ್ಟು ಕೆಡೆವ ತೆರದಿಂ**
**ಕೆಡೆದಾಲಮನಿದಿರೊಳವನಿಪಾಲಂ ಕಂಡಂ** (ಕನ್ನಡ ಸಾಹಿತ್ಯ ಚರಿತ್ರೆಯ ಅಧ್ಯಯನ, ಪು.ಸಂ.71)

ಹೀಗೆ ನಾಗಚಂದ್ರನ ಮಲ್ಲಿನಾಥಪುರಾಣವು ಕಾಲು ಭಾಗದಷ್ಟು ಕತೆಯನ್ನು ಹೊಂದಿದ್ದರೆ, ಮುಕ್ಕಾಲು ಭಾಗ ವರ್ಣನೆಗಳೆ ಇಲ್ಲಿ ತುಂಬಿಕೊಂಡಿರುವವು. ಇದೇ ರೀತಿಯ ಹಲವಾರು ವರ್ಣನೆಗಳು ಪ್ರಸ್ತುತ ಕಾವ್ಯದಲ್ಲಿ ಕಂಡುಬರುತ್ತದೆ. ಪಾತ್ರ ಚಿತ್ರಣ, ಸನ್ನಿವೇಶ ನಿರೂಪಣೆಯನ್ನು ಕಾವ್ಯದಾದ್ಯಂತ ಕಂಡಾಗ ಇದೊಂದು ಮಹಾಕಾವ್ಯದ ಸತ್ವವುಳ್ಳ ಸತ್ಕಾವ್ಯವೆಂದು ಇದನ್ನು ವಿದ್ವಾಂಸರು ಉಲ್ಲೇಖಿಸುತ್ತಾರೆ.

**ರಾಮಚಂದ್ರಚರಿತಪುರಾಣ (ಪಂಪ ರಾಮಾಯಣ)**

'ಪಂಪರಾಮಾಯಣ'ವೆಂದು ಜನಪ್ರಿಯವಾಗಿರುವ 'ರಾಮಚಂದ್ರಚರಿತಪುರಾಣ'ವು ನಾಗಚಂದ್ರನು ರಚಿಸಿದ ಎರಡನೆಯ ಕೃತಿಯಾಗಿದೆ. ನಾಗಚಂದ್ರನ ಕೀರ್ತಿಯು ನಿಂತಿರುವುದು ಈ ಕೃತಿಯಿಂದಲೇ. ಈ ಗ್ರಂಥವು ಜೈನ ಪರಂಪರೆಗೆ ಅನುಗುಣವಾಗಿ ರಚಿತವಾಗಿದ್ದು ಇದರಲ್ಲಿ ಜೈನ ಸಂಪ್ರದಾಯದಂತೆ ರಾಮಾಯಣದ ಕಥೆಯನ್ನು ಉತ್ಕೃಷ್ಟವಾದ ರೀತಿಯಲ್ಲಿ ಪ್ರತಿಪಾದನೆ ಮಾಡಲಾಗಿದೆ.

'ರಾಮಚಂದ್ರಚರಿತಪುರಾಣ'ದಲ್ಲಿ ರಾಮಾಯಣದ ಕಥೆಯೇ ಇದ್ದರೂ ಕೆಲವೊಂದಿಷ್ಟು ಬದಲಾವಣೆಗಳೊಂದಿಗೆ ಜೈನಧರ್ಮದ ಸಂಪ್ರದಾಯದಂತೆ ರಚಿಸಲಾಗಿದೆ. ನಾಗಚಂದ್ರನ ಈ ಕೃತಿಗೆ ಮೂಲ ವಿಮಲಸೂರಿಯ ಪ್ರಾಕೃತ 'ಪಉಮಚರಿಯ' ಹಾಗೂ ರವಿಷೇಣನ ಸಂಸ್ಕೃತ ರಾಮಾಯಣ (ಪದ್ಮಪುರಾಣ) ಗ್ರಂಥಗಳೇ ಪ್ರಮುಖ ಆಧಾರಗಳೆಂದು ವಿದ್ವಾಂಸರ ಅಭಿಮತ. ಅಲ್ಲದೆ ನಾಗಚಂದ್ರನು ಸ್ವತಃ ತನ್ನ ಪುರಾಣದ ಕೊನೆಯಲ್ಲಿ ಹೀಗೆ ಹೇಳಿಕೊಂಡದ್ದು ಕಂಡುಬರುತ್ತದೆ:

***"ಪಿರಿದೆನಿಸಿರ್ದ ರಾಮಕಥೆಯಂ ಕಿರಿದಾಗಿರೆ ದೇಸಿ ಮಾರ್ಗಮಂ***
***ಬೆರಡರೊಳಂ ರಸಂಬಡೆದು ಪಂಡಿತ ಮಂಡಲಿ ಮೆಚ್ಚೆ ನೇರ್ಪುವೆ***
***ತ್ತಿರಲವಿರೋಧಮಾಗೆ ಕೃತಿವೇಲ್ವೊಡೆ ಸತ್ಕವಿ ನಾಗಚಂದ್ರನಂ***
***ತಿರೆ ಪೆರರಾರ್ ಸರಸ್ವತಿ ಕುಡಲ್ ಪಡೆದರ್ವರಮಂ ಕವೀಶ್ವರರ್"***

(ಕನ್ನಡ ಸಾಹಿತ್ಯ ಚರಿತ್ರೆಯ ಅಧ್ಯಯನ, ಪು.ಸಂ.72)

'ಹಿರಿದೆನಿಸಿದ್ದ ರಾಮನ ಕಥೆಯನ್ನು ಕಿರಿದಾಗಿಸಿ ದೇಸಿ, ಮಾರ್ಗ ಎರಡರಲ್ಲಿಯೂ ರಸವತ್ತಾಗಿ, ಪಂಡಿತರು ಮೆಚ್ಚುವ ರೀತಿಯಲ್ಲಿ ಅವಿರೋಧವಾಗಿ ಕೃತಿಯನ್ನು ರಚಿಸುವಲ್ಲಿ ಸತ್ಕವಿ ನಾಗಚಂದ್ರನಂತೆ ಬೇರೆ ಯಾರು ಸರಸ್ವತಿಯಿಂದ ವರವನ್ನು ಪಡೆದರು' ಎಂದು ಕವಿ ಹೇಳಿಕೊಂಡಿರುವುದನ್ನು ಗಮನಿಸಿದಾಗ 'ರಾಮಚಂದ್ರಚರಿತಪುರಾಣ'ಕ್ಕೆ ಮೂಲ ಯಾವ ಕೃತಿಯೆಂದು ಕಷ್ಟವಾಗುತ್ತದೆ.

ನಾಗಚಂದ್ರನ ರಾಮಚಂದ್ರಚರಿತಪುರಾಣದ ಮೇಲೆ 'ವಿಮಲಸೂರಿ' ಮತ್ತು 'ರವಿಷೇಣ'ರ ಪ್ರಭಾವ ಇರುವುದು ಅಲ್ಲಿ ಕಂಡುಬರುವದಲ್ಲದೆ ಅಲ್ಲಿ ಬರುವ ಸನ್ನಿವೇಶಗಳು ಒಂದೇ

ರೀತಿಯಾಗಿವೆ. ಅಲ್ಲದೆ ನಮಗೆಲ್ಲ ಚಿರಪರಿಚಿತವಿರುವ ರಾಮಾಯಣದ ಕಥೆಗೂ ಜೈನರಾಮಾಯಣದ ಕಥೆಗೂ ತುಂಬಾ ಮಹತ್ವದ ವ್ಯತ್ಯಾಸಗಳಿರುವುದನ್ನು ಕಾಣುತ್ತೇವೆ. ಅವುಗಳಲ್ಲಿ ಮುಖ್ಯವಾದವುಗಳೆಂದರೆ...

- ರಾಮಚಂದ್ರಚರಿತಪುರಾಣ (ಜೈನ ರಾಮಾಯಣ) ದಲ್ಲಿ ಎಲ್ಲಾ ಪಾತ್ರಗಳು ಅಥವಾ ವ್ಯಕ್ತಿಗಳು ಜೈನರವು, ಅಹಿಂಸಾ ವ್ರತಿಗಳು.
- ಇಲ್ಲಿ ರಾಮ ವಿಷ್ಣುವಿನ ಅವತಾರವಲ್ಲ; ಅವನು ಜೈನರ ತ್ರಿಷಷ್ಟಿಶಲಾಕಾಪುರುಷರಲ್ಲಿ ಒಬ್ಬನಾದ ಬಲದೇವ ಹಾಗೂ ಲಕ್ಷ್ಮಣನು ವಾಸುದೇವ. ರಾವಣನನ್ನು ಕೊಲ್ಲುವವನು ಲಕ್ಷ್ಮಣನೇ ಹೊರತು ರಾಮನಲ್ಲ.
- ಸೀತೆಯು ಅಯೋನಿಜೆಯಲ್ಲ; ಪ್ರಭಾ ಮಂಡಲನ ತಂಗಿ, ಜನಕನ ಔರಸ ಪುತ್ರಿ.
- ರಾಮಲಕ್ಷ್ಮಣರ ಮೇಲ್ಮೆಯನ್ನೂ ಭಾಗ್ಯವನ್ನು ಕಂಡು ಭರತನು ವಿಷಾಧಿಸುತ್ತಾನೆ. ವಾಲ್ಮೀಕಿ ರಾಮಾಯಣದ ಉದಾತ್ತ ಭರತನಲ್ಲ.
- ರಾವಣನು ಖೇಚರರಾಜನೇ ವಿನಾ ರಾಕ್ಷಸನಲ್ಲ.
- ಸುಗ್ರೀವ ಹನುಮಂತಾದಿಗಳು ಕಪಿಗಳೇ ಅಲ್ಲ, ಕಪಿಧ್ವಜರು; ಇವರು ಸಮುದ್ರವನ್ನು ಹಾರುವುದು ಆಕಾಶಗಾಮನೀ ವಿದ್ಯೆಯಿಂದ. ಈ ಕಪಿಧ್ವಜರು ರಾಕ್ಷಸರ ಬಂಧುಗಳು, ಹನುಮಂತನು ರಾವಣನ ತಂಗಿಯ ಅಳಿಯ, ಅಂದರೆ ಸಂಸಾರಿ.
- ಇಲ್ಲಿ ಪುತ್ರಕಾಮೇಷ್ಠಿಯಾಗ, ಚಿನ್ನದ ಜಿಂಕೆಯ ಪ್ರಸಂಗ, ಮಂಥರೆಯ ಪ್ರಸಂಗ ಇತ್ಯಾದಿಗಳು ಇರುವುದಿಲ್ಲ.

ಹೀಗೆ ಇನ್ನು ಅನೇಕ ವ್ಯತ್ಯಾಸಗಳನ್ನು ಪಂಪರಾಮಾಯಣದಲ್ಲಿ ಕಾಣಬಹುದು. ಇಂತ ಅನೇಕ ಸೂಕ್ಷ್ಮ ವ್ಯತ್ಯಾಸಗಳಿಂದ ಕೂಡಿ ವಾಲ್ಮೀಕಿ ರಾಮಾಯಣಕ್ಕಿಂತ ಭಿನ್ನವಾಗಿ ಜೈನ ಪರಂಪರೆಯ ರಾಮಾಯಣವು ವಿಮಲಸೂರಿ, ರವಿಷೇಣ, ಹೇಮಚಂದ್ರ ಮುಂತಾದ ಸಂಸ್ಕೃತ–ಪ್ರಾಕೃತ ಕವಿಗಳ ವಿಚಾರಧಾರೆಯನ್ನು ಅಳವಡಿಸಿಕೊಂಡು ಅವರ ಮಾರ್ಗದಲ್ಲಿಯೇ ನಾಗಚಂದ್ರನು ನಡೆದಿದ್ದಾನೆಂದು ಹೇಳಬಹುದು.

ನಾಗಚಂದ್ರನ ಈ ಪಂಪರಾಮಾಯಣದಲ್ಲಿ ನಮ್ಮ ಮನಸ್ಸನ್ನು ಸೆಳೆಯುವ ಪಾತ್ರವೆಂದರೆ ರಾವಣನದು. ರಾವಣನು ಇಲ್ಲಿ ಒಬ್ಬ ಮಹಾಪುರುಷ. 'ಪರಾಂಗನಾವಿರತಿ ವ್ರತ'ವನ್ನು ಕೈಕೊಂಡವನು. ಅವನು ಪರಸ್ತ್ರೀಯರನ್ನು ತಾಯಿಯಂತೆ ಕಾಣುವ ದೃಶ್ಯವು ಕಾವ್ಯದಲ್ಲಿ

ಕಂಡುಬರುತ್ತದೆ. "ಆದರೆ ದುರ್ವಿಧೀವಶದಿಂದ ಒಂದು ದುರ್ಬಲ ನಿಮಿಷದಲ್ಲಿ ಸೀತೆಯನ್ನು ಕಾಮಿಸಿದನು. ಅವಳ ಪತಿಭಕ್ತಿಯನ್ನು ನೋಡಿ ಪಶ್ಚಾತಾಪದಿಂದ ಪುನೀತನಾದನು. ಮಿಮಲಸೂರಿಯ ಈ ಪಾತ್ರಕಲ್ಪನೆಯನ್ನು ನಾಗಚಂದ್ರ ತನ್ನದಾಗಿ ಮಾಡಿಕೊಂಡು ಅದರ ನಿರ್ವಚನ ಮಾಡಿದ್ದಾನೆ" ಎಂದು ರಂ.ಶ್ರೀ.ಮುಗಳಿಯವರು ಅಭಿಪ್ರಾಯಪಡುತ್ತಾರೆ.

**ಸಮಾರೋಪ**

ಹೀಗೆ ಕನ್ನಡ ಸಾಹಿತ್ಯ ಕಂಡ ವಿಶೇಷ ಕವಿಗಳಲ್ಲಿ ನಾಗಚಂದ್ರನು ಒಬ್ಬ. ನಾಗಚಂದ್ರನು ಎರಡು ಅಮೂಲ್ಯವಾದ ಕೃತಿರತ್ನಗಳನ್ನು ರಚಿಸಿ ಚಿರನೂತನವಾಗಿ ಕನ್ನಡ ಸಾಹಿತ್ಯ ಚರಿತ್ರೆಯಲ್ಲಿ ಅಮರನಾಗಿದ್ದಾನೆ. ಈತ ಅತ್ಯಂತ ಲಲಿತವಾಗಿ ಬರೆಯಬಲ್ಲ ಕವಿಯಾಗಿದ್ದಾನೆ. ಅವನ ಮಾತುಗಾರಿಕೆ ಮನುಷ್ಯರ ಸ್ವಭಾವ ಪರಿಚಯ, ಶ್ರೇಷ್ಠ ರೀತಿಯ ಪಾತ್ರದುರಂತವನ್ನು ತಂದುಕೊಂಡ ಮಹಾನುಭಾವ. ವಿಷಯದ ಅರ್ಥವ್ಯಾಪ್ತಿಗೆ ತಕ್ಕಂತೆ ಅವನ ಪದಪ್ರಯೋಗ ಬಳಕೆ ಮುಂತಾದವುಗಳಿಂದ ಇಂದಿಗೂ ನಾಗಚಂದ್ರನು ಉನ್ನತವಾದ ಸ್ಥಾನವನ್ನು ಪಡೆದಿದ್ದಾನೆ.

**ಪರಾಮರ್ಶನ ಗ್ರಂಥಗಳು**


- ಹೀರೆಮಠ ಎಸ್.ವಿ. (2004). ಕನ್ನಡ ಸಾಹಿತ್ಯ ಚರಿತ್ರೆಯ ಅಧ್ಯಯನ. ಮಾತೃ ಪ್ರಕಾಶನ, ಗದಗ.
- ಕೀರ್ತಿನಾಥ ಕುರ್ತಕೋಟಿ. (1997), ಕನ್ನಡ ಸಾಹಿತ್ಯ ಸಂಗಾತಿ. ಕುರ್ತಕೋಟಿ ಮೆಮೋರಿಯಲ್ ಟ್ರಸ್ಟ್, ಧಾರವಾಡ.
- ಮೋತಕಪಳ್ಳಿ ಶಿವಶರಣಪ್ಪ. (ಸಂ). (2016). ಕನ್ನಡ ಸಾಹಿತ್ಯ ಸಮಜೀವಿನಿ. ಮೋತಕಪಳ್ಳಿ ಪ್ರಕಾಶನ. ಗುಲ್ಬರ್ಗಾ.
- ಮುಗಳಿ. ರಂ. ಶ್ರೀ. (2012). ಕನ್ನಡ ಸಾಹಿತ್ಯ ಚರಿತ್ರೆ. ಗೀತಾ ಬುಕ್ ಹೌಸ್, ಮೈಸೂರು.
- ನಾರಾಯಣ. ಪಿ. ವಿ. (2010). ಚಂಪೂ ಕವಿಗಳು. ಸಪ್ನ ಬುಕ್ ಹೌಸ್, ಬೆಂಗಳೂರು.